# ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 902
ಉತ್ತರಿಸಬೇಕಾದ ದಿನಾಂಕ : 24.07.2024
ಸದಸ್ಯರ ಹೆಸರು : ಶ್ರೀ ಬಿ ಜಿ ಪಾಟೀಲ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಲಬುರ್ಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಸಾಲಭಾಧೆ, ಬರಪರಿಸ್ಥಿತಿಯಿಂದ ಆತ್ಮಹತ್ಯೆ ಮಾಡಿಕೊಂಡ ರೈತ ಕುಟುಂಬಗಳಿಗೆ ಪರಿಹಾರ ವಿತರಿಸುವಂತೆ ಸಂಘ ಸಂಸ್ಥೆಗಳು ಜಿಲ್ಲಾಧಿಕಾರಿಗಳ ಕಛೇರಿ ಬಳಿ ಪ್ರತಿಭಟನೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:</td><td>ಕಲಬುರ್ಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ರೈತರ ಆತ್ಮಹತ್ಯೆ ಪ್ರಕರಣಗಳ ಪರಿಹಾರ ವಿತರಣೆಗೆ ಸಂಬಂಧಿಸಿದಂತೆ ಸಂಘ ಸಂಸ್ಥೆಗಳಿಂದ ಜಿಲ್ಲಾಧಿಕಾರಿಗಳ ಕಛೇರಿ ಬಳಿ ಯಾವುದೇ ಪ್ರತಿಭಟನೆಗಳು ನಡೆದಿರುವುದಿಲ್ಲ.</td></tr>
<tr><td>ಆ)</td><td>ಈ ಮೇಲ್ಕಂಡ ಜಿಲ್ಲೆಗಳಲ್ಲಿ 2021 ರಿಂದ 2024 ರವರೆಗೆ ರೈತರು ಸಾಲಬಾಧೆ, ಬರಪರಿಸ್ಥಿತಿಯಿಂದ ಆತ್ಮಹತ್ಯೆ ಮಾಡಿಕೊಂಡ ಪ್ರಕರಣಗಳೆಷ್ಟು: (ಅಂಕಿ-ಅಂಶದ ವಿವರ ನೀಡುವುದು)</td><td>ಕಲಬುರ್ಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ 2021 ರಿಂದ 2024 ರವರೆಗೆ ಕೆಳಕಂಡಂತೆ ರೈತರ ಆತ್ಮಹತ್ಯೆ ಪ್ರಕರಣಗಳು ವರದಿಯಾಗಿರುತ್ತವೆ.
<table>
<tr><th>ವರ್ಷ</th><th>ಕಲಬುರ್ಗಿ</th><th>ಯಾದಗಿರಿ</th></tr>
<tr><td>2021-22</td><td>98</td><td>55</td></tr>
<tr><td>2022-23</td><td>55</td><td>52</td></tr>
<tr><td>2023-24</td><td>53</td><td>59</td></tr>
<tr><td>2024-25(ತಹಲ್ ವರೆಗೆ)</td><td>2</td><td>2</td></tr>
<tr><td>ಒಟ್ಟು</td><td>208</td><td>168</td></tr>
</table></td></tr>
<tr><td>ಇ)</td><td>ಇವುಗಳಲ್ಲಿ ಎಷ್ಟು ರೈತ ಕುಟುಂಬಗಳಿಗೆ ಪರಿಹಾರ ವಿತರಿಸಲಾಗಿದೆ: ಇನ್ನು ಎಷ್ಟು ಕುಟುಂಬಗಳಿಗೆ ಪರಿಹಾರ ವಿತರಿಸಬೇಕಾಗಿದೆ ಹಾಗೂ ಯಾವಾಗ ವಿತರಿಸಲಾಗುವುದು: ಪರಿಹಾರ ವಿಳಂಬಕ್ಕೆ ಕಾರಣಗಳೇನು? (ವಿವರ ನೀಡುವುದು)</td><td>ಯಾದಗಿರಿ ಜಿಲ್ಲೆಯಲ್ಲಿ ವರದಿಯಾಗಿರುವ ಒಟ್ಟು 168 ಪ್ರಕರಣಗಳಿಗೆ ಈಗಾಗಲೇ ಪರಿಹಾರ ಪಾವತಿಸಲಾಗಿದೆ.<br>ಕಲಬುರ್ಗಿ ಜಿಲ್ಲೆಯಲ್ಲಿ ವರದಿಯಾಗಿರುವ ಒಟ್ಟು 208 ಪ್ರಕರಣಗಳ ಪೈಕಿ 182 ಪ್ರಕರಣಗಳಿಗೆ ಈಗಾಗಲೇ ಪರಿಹಾರ ಪಾವತಿಸಲಾಗಿದೆ. ಉಳಿದ 24 ಪ್ರಕರಣಗಳು 2022-23 ನೇ ಸಾಲಿನದಾಗಿದ್ದು, ಸದರಿ ಪ್ರಕರಣಗಳಲ್ಲಿ ರೈತ ಆತ್ಮಹತ್ಯೆಯು 2022-23 ನೇ ಸಾಲಿನಲ್ಲಿ ಸಂಭವಿಸಿದ್ದು, ಪ್ರಸಕ್ತ ಸಾಲಿನಲ್ಲಿ ವರದಿಯಾಗಿ ಉಪವಿಭಾಗಾಧಿಕಾರಿಗಳ ಸಮಿತಿಯಲ್ಲಿ ಅರ್ಹ ಪ್ರಕರಣಗಳೆಂದು ತೀರ್ಮಾನಗೊಂಡಿದ್ದರಿಂದ, ಕಲಬುರ್ಗಿ ಜಿಲ್ಲೆಯಲ್ಲಿ ಪರಿಹಾರ ಪಾವತಿಸಲು ಬಾಕಿಯಿರುವ 24 ರೈತ ಆತ್ಮಹತ್ಯೆ ಪ್ರಕರಣಗಳಿಗೆ ಪರಿಹಾರ ಪಾವತಿಸಲು ಕ್ರಮವಹಿಸಲಾಗಿದೆ.</td></tr>
</table>

**ಕಡತ ಸಂಖ್ಯೆ:ಆರ್‌ಡಿ 128 ಕೆ.ಎ.ಟಿ/ ಎಸ್.ಎಸ್.ಪಿ 2024**

**( ಕೃಷ್ಣ ಬೈರೇಗೌಡ)**
**ಕಂದಾಯ ಸಚಿವರು**